# 27-09-2025

# KALASAMBRAHAMA -2025



ಮನುಷ್ಯರಲ್ಲಿರುವ ಭಾವನೆಗಳನ್ನು ಅಭಿವ್ಯಕ್ತ ಪಡಿಸುವ ಮತ್ತು ಅರಿವಿನ ಮೇಲೆ ಪ್ರಭಾವ ಬೀರುವ ಪ್ರಜ್ಞಾ ಪೂರ್ವಕ ಮಾಧ್ಯಮವೇ **"ಕಲೆ"** ಎಂದು ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಹಾಗೂ ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ಪರೀಕ್ಷಾಂಗ ಕುಲಸಚಿವ ಡಾ.ಮಂಜುನಾಥ.ಎಂ.ಜಿ ಅವರು ಅಭಿಪ್ರಾಯ ಪಟ್ಟರು.

ನಗರದ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ಇಂದು ಏರ್ಪಡಿಸಿದ್ದ ಪ್ರಸಕ್ತ ಸಾಲಿನ **"ಕಲಾಸಂಭ್ರಮ – ಕಲೆಯ ಸಂಭ್ರಮ, ಸಂಸ್ಕೃತಿಯ ಸಿರಿವಂತಿಕೆ"** ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು. ಮೈಸೂರು ಸಾಂಸ್ಕೃತಿಕ ರಾಜಧಾನಿಯಾದರೇ ಕರ್ನಾಟಕ ಕಲೆಗಳ ತವರೂರು ಎಂದೇ ಪ್ರಖ್ಯಾತವಾಗಿದೆ. ಇಂತಹ ಕಲೆಗಳಲ್ಲಿ ದೃಶ್ಯ, ಪ್ರದರ್ಶನ, ಸಾಹಿತ್ಯ ಕಲೆಗಳೆಂಬ ಪ್ರಾಕಾರಗಳಿವೆ. ಸಾಹಿತ್ಯವಿಲ್ಲದೇ ಯಾವುದೇ ನೃತ್ಯವಾಗಲೀ, ಪ್ರದರ್ಶನವಾಗಲೀ ಇರುವುದಕ್ಕೆ ಸಾಧ್ಯವಿಲ್ಲ. ಕಲೆಗಳ ಮೂಲ ಉದ್ದೇಶವೇ ವ್ಯಕ್ತಿಗಳ ಮನಸ್ಸಿಗೆ ಆಹ್ಲಾದವನ್ನು ಉಂಟುಮಾಡುವುದಾಗಿದೆ. ಉದ್ರಿಕ್ತಗೊಂಡ ಮನಸ್ಸನ್ನು ಸಂಗೀತದ ಮೂಲಕ ಸಂತೈಸಬಹುದಾಗಿದೆ. ಇಂತಹ ಸಂಗೀತಗಳ ತವರೂರು ನಮ್ಮದು, ಕರ್ನಾಟಕ ಸಂಗೀತ ನಮ್ಮ ನೆಲದಲ್ಲಿಯೇ ಹುಟ್ಟಿ ದೇಶದಾದ್ಯಂತ ಪಸರಿಸಿದೆ. ಭರತ ನಾಟ್ಯದ ಪ್ರಾಚೀನ ಉಲ್ಲೇಖ ಹಾಗೂ ನಟರಾಜನ ಪ್ರಾಚೀನ ಮೂರ್ತಿ ಶಿಲ್ಪ ನಮ್ಮಲ್ಲಿಯೇ ದೊರೆತಿವೆ ಎನ್ನುವುದಕ್ಕೆ ಹಲವು ಸಾಕ್ಷಿಗಳು ಸಿಗುತ್ತವೆ. ಮಾಗಡಿ ಸಮೀಪದ ಪುಂಡರೀಕ ವಿಠಲ ಎಂಬ ಪ್ರಸಿದ್ಧ ಸಂಗೀತ ವಿದ್ವಾಂಸನನ್ನ ಅಕ್ಬರ್ ತನ್ನ ಆಸ್ಥಾನದಲ್ಲಿ ಪೋಷಿಸಿ ಅವರಿಂದ ಕಲೆಗೆ ಸಂಬಂಧಿಸಿದ ಹಲವಾರು ಗ್ರಂಥಗಳನ್ನು ರಚಿಸಿದ್ದುದು ನಮ್ಮ ಕನ್ನಡ ನೆಲದ ಹೆಮ್ಮೆಯಾಗಿದೆ. ಮೈಸೂರು ಒಡೆಯರ್‌ಗಳು ಕಲೆ ಮತ್ತು ಸಾಹಿತ್ಯಕ್ಕೆ ಅತಿ ಹೆಚ್ಚು ಪ್ರೋತ್ಸಾಹ ನೀಡಿ, ಕಲಾವಿದರಿಗೆ ಆಶ್ರಯ ನೀಡುವ ಮೂಲಕ ಸಂಸ್ಥಾನದ ಹಿರಿಮೆ ದೇಶಾದ್ಯಂತ ಹರಡಲು ಕಾರಣಕರ್ತರಾಗಿದ್ದಾರೆ. ಈ ಸಂಬಂಧ ವಿದ್ಯಾವರ್ಧಕ ಸಂಸ್ಥೆ ಕಲೆಯಲ್ಲಿ ಸಾಧನೆಗೈಯ್ಯುವ ವಿದ್ಯಾರ್ಥಿಗಳಿಗೆ ಸೂಕ್ತ ವೇದಿಕೆ ಕಲ್ಪಿಸಿ ಪ್ರೋತ್ಸಾಹ ನೀಡುತ್ತಿರುವುದು ತುಂಬಾ ಮೆಚ್ಚುವಂಥ ಸಂಗತಿಯಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಸಂಸ್ಥೆಯ ಕೋಶಾಧ್ಯಕ್ಷ ಶ್ರೀಶೈಲರಾಮಣ್ಣವರ್ ಮಾತನಾಡುತ್ತಾ ಚಿಂತನಶೀಲ ಕಲೆಯ ಅಭಿವ್ಯಕ್ತಿಯ ಮಾಧ್ಯಮವಿಂದು ರಾಜಕೀಯ ಕೈಗೊಂಬೆಯಾಗಿದೆ, ಮಾಧ್ಯಮ ಜನರ ಧ್ವನಿಯಾಗಿದ್ದು ಸೃಜನಶೀಲತೆಯ ನೆಲೆಯಾಗಿದೆ, ಪ್ರಜಾ ಪ್ರಭುತ್ವದ ಕನ್ನಡಿ ಸ್ವಾರ್ಥಪರ ಹಿತಾಸಕ್ತಿಯನ್ನು ಕಡೆಗಣಿಸಿ ನೈತಿಕತೆಯ ನೆಲೆಯಲ್ಲಿ ನಿಲ್ಲಬೇಕಾಗಿರುವುದು ಇಂದಿನ ತುರ್ತು ಅಗತ್ಯವಾಗಿದೆ. ಚರ್ಚೆಗಳು ಯಾವಾಗಲೂ ನಮ್ಮ ಬುದ್ಧಿಯನ್ನು ತೀಕ್ಷ್ಣಗೊಳಿಸ ಬೇಕಾಗಿದ್ದು ವಿಭಿನ್ನ ದೃಷ್ಟಿಕೋನದಿಂದ ಚಿಂತಿಸಿ, ಸೋಲೆ ಗೆಲುವಿನ ಮೆಟ್ಟಿಲು ಎಂಬ ಮನೋಭಾವದಿಂದ ಸ್ಪರ್ಧೆಯಲ್ಲಿ ಭಾಗವಹಿಸಿ ಎಂದು ಸ್ಪರ್ಧಾರ್ಥಿಗಳಿಗೆ ಶುಭ ಹಾರೈಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಪ್ರಾಂಶುಪಾಲ ಡಾ.ಎಸ್.ಮರೀಗೌಡ ಕಲಾಸಂಭ್ರಮ ಕಳೆದ ಕೆಲವು ವರ್ಷಗಳಿಂದ ನಮ್ಮ ಕಾಲೇಜಿನಲ್ಲಿ ಯಶಸ್ವಿಯಾಗಿ ನಡೆದುಕೊಂಡು ಬರುತ್ತಿದ್ದು ವಿದ್ಯಾರ್ಥಿಗಳು ಕೇವಲ ಓದಿಗೆ ಮಾತ್ರ ಸೀಮಿತವಾಗದೇ ತಮ್ಮಲ್ಲಿರುವ ಪ್ರತಿಭೆಯ ಮೂಲಕ ಕಲೆಗೆ ತೆರೆದುಕೊಳ್ಳುವ ವೇದಿಕೆಯಾಗಿದೆ ಈ ಕಲಾಸಂಭ್ರಮ. ಕಲೆಗೆ ಬೆಲೆಯಿದ್ದು, ಕಲೆಯ ಬಗ್ಗೆ ತಿಳಿದವರಿಗೆ ಮಾತ್ರ ಅದರ ಬೆಲೆ ಗೊತ್ತು ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಗೌ॥ಅಧ್ಯಕ್ಷ ಗುಂಡಪ್ಪಗೌಡ ಕಲೆ ಮತ್ತು ಸಂಗೀತಕ್ಕೆ ಮೈಸೂರಿನ ಒಡೆಯರು ಹೆಚ್ಚಿನ ಒತ್ತು ಕೊಟ್ಟಿದ್ದರು. ಪಿಟೀಲು ಚೌಡಯ್ಯನಂತಹ ಹಲವು ಕಲಾವಿದರಿಗೆ ತಮ್ಮ ಅರಮನೆಯಲ್ಲಿ ಆಶ್ರಯ ನೀಡುವ ಮೂಲಕ ಗತಕಾಲದ ಭಾರತೀಯ ಸಂಸ್ಕೃತಿಯನ್ನು ಪುನರುಜ್ಜೀವನ ಗೊಳಿಸುವ ಕಾರ್ಯಮಾಡುತ್ತಿದ್ದರು. ವಿದ್ಯಾರ್ಥಿಗಳು ಹೆಚ್ಚೆಚ್ಚು ಅಧ್ಯಯನ ಮಾಡಿದಷ್ಟು ಅವರ ಬುದ್ಧಿ ತೀಕ್ಷ್ಣವಾಗುತ್ತದೆ ಆದುದರಿಂದ ಇಂತಹ ಸ್ಪರ್ಧೆಗಳಲ್ಲಿ ಭಾಗವಹಿಸಿ ಅರಿವಿನ ಮಟ್ಟವನ್ನು ಹೆಚ್ಚಿಸಿಕೊಳ್ಳಿ ಎಂದು ಸಲಹೆ ನೀಡಿದರು.

ಕು.ಪ್ರಿಯಾಂಕ. ಸ್ವಾಗತಿಸಿದ ಕಾರ್ಯಕ್ರಮವನ್ನು ಪ್ರೊ.ಲಾವಣ್ಯ.ಎಸ್ ನಿರೂಪಿಸಿದರು. ಕಾಲೇಜು ನಿರ್ವಹಣಾ ಮಂಡಳಿಯ ಅಧ್ಯಕ ಟಿ.ನಾಗರಾಜು, ರಾಜ್ಯದ ನಾನಾ ಕಾಲೇಜುಗಳಿಂದ ಆಗಮಿಸಿದ್ದ ಸ್ಪರ್ಧಾಳುಗಳು, ಅಧ್ಯಾಪಕ ಪ್ರತಿನಿಧಿಗಳು, ವಿದ್ಯಾರ್ಥಿಗಳು, ಅಧ್ಯಾಪಕರು ಹಾಗೂ ಅಧ್ಯಾಪಕೇತರರು ಹಾಜರಿದ್ದ ಕಾರ್ಯಕ್ರಮವನ್ನು ಪ್ರೊ.ಅರವಿಂದ್.ಆರ್ ಸ್ವಾಗತಿಸಿ ಪ್ರೊ.ಚೆಲುವರಾಜು.ಎಂ.ಎಲ್ ವಂದಿಸಿದರು.






ಕಲಾ ಸಂಭ್ರಮ: 2025–26


ಕಲಾ ಸಂಭ್ರಮ: 2025–26
ಕಲೆಯ ಸಂಭ್ರಮ, ಸಂಸ್ಕೃತಿಯ ಸಿರಿವಂತಿಕೆ


ಕಲಾ ಸಂಭ್ರಮ: 2025–26


ಕಲಾ ಸಂಭ್ರಮ: 2025–26


ಕಲಾ ಸಂಭ್ರಮ: 2025-26






















ಕಲಾ ಸಂಭ್ರಮ: 2025–26


ಕಲಾ ಸಂಭ್ರಮ: 2025–26






ಕಲಾ ಸಂಭ್ರಮ: 2025-26














ಕಲಾ ಸಂಭ್ರಮ: 2025-26


ಕಲಾ ಸಂಭ್ರಮ: 2025-26




ಕಲಾ ಸಂಭ್ರಮ: 2025-26





